ಸಂಗತಿ. ಆದಕ್ಕಾಗಿ ಇದು ಒಂದು ಬಹಳ ಮಹತ್ವದ ವಿಷಯವಿದೆ. ಆದಕ್ಕಾಗಿ ನಾವು ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ. ಆದ್ದರಿಂದ ತಾವು ದಯವಿಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಮತ್ತು ಈ ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ ಸೋಮಶೇಖರ್ : ಮಾನ್ಯ ಅಧ್ಯಕ್ಷರೇ,

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, This is a policy matter of the Government. ಮೂರು ವರ್ಷಗಳ ಕೆಳಗೆ ಈ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಜಲಮಂಡಲಿಯನ್ನು ಖಾಸಗೀಕರಣಗೊಳಿಸಲು ಸರ್ಕಾರ ಒಂದು ನೀತಿಯನ್ನು ಘೋಷಣೆ ಮಾಡಿದೆ. ಆ ನೀತಿಯ ಬಗ್ಗೆ ಅವರು ನಿಲುವಳಿ ಸೂಚನೆಯನ್ನು ಹೇಗೆ ತರುವುದಕ್ಕೆ ಸಾಧ್ಯ?

Mr. Speaker : I am not allowing. They are closing within one minute. We will take up regular work within two minutes.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ :- ಬಿಡದಿ ಬಳಿ ದಲಿತ ಮಹಿಳೆಯ ಕೊಲೆ

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ಬಿಡದಿ ಹೋಬಳಿ ದೊಡ್ಡ ಬೆಲೆಗ್ರಾಮದಲ್ಲಿ ಇಬ್ಬರು ದಲಿತ ಕುಟುಂಬದವರು, ಒಬ್ಬ ದಲಿತ ಮುಖಂಡ ಮತ್ತು ದಲಿತ ಮಹಿಳೆಯ ಇಬ್ಬರ ಕೊಲೆಯಾಗಿದೆ. ಸರ್ಕಾರಿ ಜಮೀನು ಬಗ್ಗೆ...

ಅಧ್ಯಕ್ಷರು : We must give almost priority to financial business ಆವಿಷಯವನ್ನು ನಾಳೆ ತೆಗೆದುಕೊಳ್ಳೋಣ. don't worry we will take us all these important issues.

ಬಿ. ಸೋಮಶೇಖರ್ : ನಾಳೆ ಯಾವುದೇ ರೀತಿಯಲ್ಲಿ ಆದರೂ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು : ಆಯಿತು.

ವಿಷಯ : ಹಾಸನ ಜಿಲ್ಲೆಯಲ್ಲಿ ಮಳೆ ಇಲ್ಲದೆ ಆಲೂಗಡ್ಡೆ ಬೆಳೆ ಹಾಳಾಗಿರುವ ಬಗ್ಗೆ

ಶ್ರೀ ಕೆ ಎಚ್ ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಸುಮಾರು 70-80 ಸಾವಿರ ಎಕರೆಯಲ್ಲಿ ಆಲೂಗಡ್ಡೆ ಬಿತ್ತನೆ ಮಾಡಿದ್ದಾರೆ. ಒಂದೂವರೆ ತಿಂಗಳಿನಿಂದ ಒಂದು ಹನಿ ಮಳೆ ಬಿದ್ದಿಲ್ಲ. ಒಂದು ಎಕರೆ ಬಿತ್ತನೆಗೆ ಸುಮಾರು 10-12 ಸಾವಿರ ರೂಪಾಯಿ ಖರ್ಚಾಗುತ್ತದೆ. ಎರಡು ಹದ ಮಳೆಯಾಗಿದ್ದರೆ ಸುಮಾರು ನೂರಾರು ಕೋಟಿ ರೂಪಾಯಿಗಳ ದುಡ್ಡು ರೈತರಿಗೆ ದೊರೆಯುತ್ತಿತ್ತು. ಇವತ್ತು ಮಳೆಯಾದರೂ ಕೂಡ 10 ಪರ್ಸೆಂಟ್ ಬೆಳೆ ಬರುವುದಿಲ್ಲ ಹಾಕಿರತಕ್ಕಂಥ ದುಡ್ಡು ಬರುವುದಿಲ್ಲ. ಈ ವಿಚಾರದಲ್ಲಿ ನಾನು 2-3 ಸಲ ಪ್ರಸ್ತಾಪ ಮಾಡಿದೆ. ದಯವಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನಾಳೆಯಿಂದ ತಮಗೆ ಏನೇನು ಮುಖ್ಯವಾದ ವಿಷಯಗಳು ಇವೆ ಅವುಗಳೆಲ್ಲವನ್ನೂ ತೆಗೆದುಕೊಳ್ಳೋಣ. ಇವತ್ತು ಬೇಡ ಇವತ್ತು ಬೇಡಿಕೆಗಳ ಚರ್ಚೆ ಮತ್ತು ಅನುಮೋದನೆ ಇದೆ. ಆದ್ದರಿಂದ ಇದು ಮುಗಿಯುವವರೆಗೂ ಬೇರೆ ಯಾವ ವಿಚಾರಗಳನ್ನು ತೆಗೆದುಕೊಳ್ಳುವುದಿಲ್ಲ. ತಾವು ಸಹಕಾರ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಾನು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದರ ಬಗ್ಗೆ ತಾವೂ ಏನು ಹೇಳಲಿಲ್ಲ.

ಅಧ್ಯಕ್ಷರು : ತಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ನಾನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆ. ಅದರ ಬಗ್ಗೆ ನಾಳೆ ನಾವು ಕುಳಿತುಕೊಂಡು ಮಾತನಾಡಿ ನಾಳೆ ತೆಗೆದುಕೊಳ್ಳೋಣ.

(ಇ) ವಿಷಯ : ತರೀಕೆರೆ ತಾಲ್ಲೂಕಿನ ಕುಂದು ಮಳೆ ಗ್ರಾಮದಲ್ಲಿ ವಾಂತಿ ಭೇದಿಯಿಂದ ಜನ ನರಳುತ್ತಿರುವುದು.

ಶ್ರೀ ಬಿ.ಆರ್. ನೀಲಕಂಟಪ್ಪ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆ ಮಾನ್ಯ ಅಧ್ಯಕ್ಷರೇ, ನಾನು ಈ ಹಿಂದೆ ಒಂದು ಪ್ರಶ್ನೆ ಕೇಳಿದ್ದೆ. ನಮ್ಮ ತರೀಕೆರೆ ತಾಲ್ಲೂಕು ಕುಂದುಮಳೆ ಇಡೀ ಗ್ರಾಮದಲ್ಲಿ ವಾಂತಿ ಭೇದಿಯಿಂದ ಜನ ನರಳುತ್ತಿದ್ದಾರೆ. ಒಂದು ವಾರದಿಂದ ಪರಿಸ್ಥಿತಿ ಬಿಗಡಾಯಿಸಿದೆ. ಜನರನ್ನು ಆಸ್ಪತ್ರೆಗೆ ಸೇರಿಸುತ್ತಿದ್ದಾರೆ.

ಅಧ್ಯಕ್ಷರು : ತಮ್ಮ ವಿಷಯವೂ ಅಷ್ಟೇ. ಬೇಡಿಕೆಗಳು ಮೊದಲು ಮುಗಿಯಲಿ ಪ್ರಶ್ನೋತ್ತರ ವೇಳೆ ಬರುತ್ತದೆ. ಅದು ಮುಗಿದ ನಂತರ ತಾವು ಪ್ರಸ್ತಾಪ ಮಾಡಬಹುದು. ಈಗ ಬೇಡ. ಈಗ ಬೇಡಿಕೆ ಸಂಖ್ಯೆ 26.

4) ವಿತ್ತೀಯ ಕಾರ್ಯಕಲಾಪಗಳು

ಅ) 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ ಹಾಗೂ ಸರ್ಕಾರದಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಬೇಡಿಕೆ ಸಂಖ್ಯೆ : 29

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 32,365,37 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 530.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 30

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 30.100.25 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,035.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.